FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಗುರುವಾರ, ಮೇ ೧೬, ೨೦೧೯ (ವೈಶಾಖ ೨೬, ಶಕ ವರ್ಷ ೧೯೪೦) Bengaluru, Thursday, May 16, 2019 (Vaisakha 26, Shaka Varsha 1940)	ನಂ. ೩೮೬ No. 386

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 146 ಸೇಸ್ಥಅ 2015, ಬೆಂಗಳೂರು, ದಿನಾಂಕ: 16.05.2019

ಕರ್ನಾಟಕ ಸರ್ಕಾರವು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ:19)ರ ಕಲಂ 11ರ ಉಪಕಲಂ (1)ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ (ತಿದ್ದುಪಡಿ) ನಿಯಮಗಳು 2017ನ್ನು ಅಧಿಸೂಚನೆ ಸಂಖ್ಯೆ:ಸಿಆಸುಇ 146 ಸೇಸ್ಥಅ 2015, ದಿನಾಂಕ:23.03.2018ನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ IV-A ಸಂಖ್ಯೆ:516ರಲ್ಲಿ ಪ್ರಕಟಿಸಿ ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಕರಡು ರಾಜ್ಯಪತ್ರದಲ್ಲಿ ಪ್ರಕಟಗೊಂಡ 15 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿತ್ತು.

ಸದರಿ ರಾಜ್ಯಪತ್ರವನ್ನು ದಿನಾಂಕ:23.03.2018ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಹಾಗೂ ಸ್ವೀಕೃತವಾದ ಆಕ್ಷೇಪಣೆ ಹಾಗೂ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದಲೂ;

ಈಗ, ಕರ್ನಾಟಕ ಸರ್ಕಾರವು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ:19)ರ ಕಲಂ 11ರ ಉಪಕಲಂ (1)ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳು, 2013ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಉದ್ದೇಶದಿಂದ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅವು ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

2. ನಿಯಮ 4ಕ್ಕೆ ತಿದ್ದುಪಡಿ:– ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳು, 2013ರ ನಿಯಮ 4ರಲ್ಲಿನ ಉಪ ನಿಯಮ (3)ರ ಬದಲಾಗಿ ಈ ಕೆಳಕಂಡಂತೆ ಪ್ರತಿಸ್ಥಾಪಿಸತಕ್ಕದ್ದು :–

"(3) ಪ್ರತಿಯೊಬ್ಬ ಅರ್ಹ ದಿನಗೂಲಿ ನೌಕರನಿಗೆ ಉಪಧನ ಪಾವತಿ ಕಾಯ್ದೆ 1972 (1972ರ ಕೇಂದ್ರ ಅಧಿನಿಯಮ ಸಂಖ್ಯೆ 39) ಸೆಕ್ಷನ್ 4ರಡಿಯಲ್ಲಿ ಅನುಮತಿಸಲ್ಪಟ್ಟಿರುವ ಮೊತ್ತವನ್ನು ಉಪಧನವೆಂದು ಪಾವತಿಸತಕ್ಕದ್ದು".

ವಿವರಣೆ: ಈ ಉಪ ನಿಯಮದ ಉದ್ದೇಶಕ್ಕಾಗಿ, ಅಧಿನಿಯಮದಡಿ ಅಧಿಸೂಚಿಸಲ್ಪಟ್ಟ ದಿನಗೂಲಿ ನೌಕರನು ದಿನಗೂಲಿ ಆಧಾರದಲ್ಲಿ ಸಲ್ಲಿಸಿದ ಸಂಪೂರ್ಣ ಸೇವಾವಧಿಯನ್ನು ಉಪಧನ ಪಾವತಿಗಾಗಿ ಪರಿಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು ಅವರ ಹೆಸರಿನಲ್ಲಿ,

ಚಂದ್ರಹಾಸ ಗಂ. ತಾಳೂಕರ
ಸರ್ಕಾರದ ಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು–2).

PERSONNEL AND ADMINISTRATIVE REFORMS SECRETARIAT
NOTIFICATION
No. DPAR 146 SLC 2015, Bengaluru, Dated:16.05.2019.

Whereas the draft of the Karnataka Daily Wage Employees Welfare (Amendment) Rules, 2017 was published as required by sub-section (1) of section 11 of the Karnataka Daily Wage Employees Welfare Act, 2012 (Karnataka Act 19 of 2013) in Notification No. DPAR 146 SLC 2015 dated:23.03.2018 in Part IV-A of the Karnataka Gazette Extraordinary No.516 dated:23.03.2018 inviting objections and suggestions from all persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 23.03. 2018.

And whereas the objections and suggestions received in respect of the said draft have been considered by the State Government.

Now, therefore, in exercise of the powers conferred by sub-section (1) of section 11 of the Karnataka Daily Wage Employees Welfare Act, 2012 (Karnataka Act 19 of 2013), the Government of Karnataka hereby makes the following rules further to amend the Karnataka Daily Wage Employees Welfare Rules, 2013, namely;

RULES

1. Title and Commencement.- (1) These rules may be called the Karnataka Daily Wage Employees Welfare (Amendment) Rules, 2019.

(2) They shall come into force on the date of their publication in the Official Gazette.

2. Amendment of rule 4.- In the Karnataka Daily Wage Employees Welfare Rules, 2013, in rule 4, for sub-rule (3), the following shall be substituted, namely:-

"(3) Every eligible Daily Wage Employee, shall be paid such amount as Gratuity, as admissible under section 4 of the Payment of Gratuity Act, 1972 (Central Act 39 of 1972)."

Explanation: For the purpose of this sub-rule, the entire period of service rendered on daily wage basis by a daily wage employee notified under the Act shall be reckoned for the payment of gratuity."

By Order and in the name of the Governor of Karnataka,

CHANDRAHAS G TALUKAR
Deputy Secretary to Government,
Department of Personnel and
Administrative Reforms (Service Rules-2).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೨೦೦